



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

سَبَّحَ لِلّٰهِ مَا فِي السَّمٰوٰتِ وَ الْاَرْضِ ۚ وَهُوَ الْعَزِيْزُ الْحَكِيْمُ ①

2. ಭೂಮಿ-ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಆಗಿರುತ್ತಾನೆ, ಅವನೇ ಜೀವನ ನೀಡುತ್ತಾನೆ ಮತ್ತು ಮರಣ ಕೊಡುತ್ತಾನೆ. ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು.

لَهٗ مُلْكُ السَّمٰوٰتِ وَ الْاَرْضِ ۚ يُحْيٖ وَ يُمِيْتُ ۚ وَهُوَ عَلٰى كُلِّ شَيْءٍ قَدِيْرٌ ②

3. ಆದಿಯೂ ಅವನೇ ಅಂತ್ಯನೂ ಅವನೇ ಮತ್ತು ಅಭಿವ್ಯಕ್ತನೂ ಅವನೇ ರಹಸ್ಯನೂ ಅವನೇ[1] ಮತ್ತು ಅವನು ಸಕಲ ವಿಷಯಗಳ ಜ್ಞಾನವುಳ್ಳವನು.

هُوَ الْاَوَّلُ وَ الْاٰخِرُ وَ الظَّاهِرُ وَ الْبَاطِنُ ۚ وَهُوَ بِكُلِّ شَيْءٍ عَلِيْمٌ ③

4. ಭೂಮಿ-ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನೇ. ಅನಂತರ ವಿಶ್ವಸಿಂಹಾಸನಾರೂಢನಾದನು. ಭೂಮಿಯೊಳಗೆ ಹೋಗುವ, ಅದರಿಂದ ಹೊರಬರುವ ಮತ್ತು ಆಕಾಶದಿಂದ ಇಳಿಯುವ ಮತ್ತು ಅದಕ್ಕೆ ಏರಿ ಹೋಗುವ ಎಲ್ಲ ವಸ್ತುಗಳ ಜ್ಞಾನ ಅವನಿಗಿದೆ.[2] ನೀವೆಲ್ಲಿದ್ದರೂ ಅವನು ನಿಮ್ಮ ಜೊತೆಗಿದ್ದಾನೆ.

هُوَ الَّذِيْ خَلَقَ السَّمٰوٰتِ وَ الْاَرْضَ فِيْ سِتَّةِ اَيَّامٍ ثُمَّ اسْتَوٰى عَلَى الْعَرْشِ ۚ يَعْلَمُ مَا يَلِجُ فِي الْاَرْضِ وَمَا يَخْرُجُ مِنْهَا وَمَا يَنْزِلُ مِنَ السَّمَآءِ وَمَا

1. ಅರ್ಥಾತ್- ಯಾವ ವಸ್ತುವೂ ಇಲ್ಲದಿದ್ದಾಗ ಅವನಿದ್ದನು ಮತ್ತು ಎಲ್ಲ ವಸ್ತುವೂ ಇಲ್ಲದಾಗುವಾಗಲೂ ಅವನಿರುವನು. ಅವನು ವ್ಯಕ್ತವಾಗುವ ಎಲ್ಲವುಗಳಿಗಿಂತಲೂ ಮಿಗಿಲಾಗಿ ವ್ಯಕ್ತವಾಗುವವನಾಗಿದ್ದಾನೆ. ಏಕೆಂದರೆ ಲೋಕದಲ್ಲಿ ವ್ಯಕ್ತವಾಗುವವುಗಳೆಲ್ಲವೂ ಅವನದೇ ಗುಣವಿಶೇಷತೆ, ಅವನದೇ ಕರ್ಮ ಮತ್ತು ಅವನದೇ ಪ್ರಕಾಶದಿಂದಾಗಿ ವ್ಯಕ್ತವಾಗಿದೆ. ಅವನು ಗುಪ್ತವಾದ ಎಲ್ಲವುಗಳಿಗಿಂತಲೂ ಹೆಚ್ಚು ಗುಪ್ತನಾಗಿದ್ದಾನೆ. ಏಕೆಂದರೆ ಇಂದ್ರಿಯಗಳಿಂದ ಅವನನ್ನು ಕಂಡುಕೊಳ್ಳುವುದಂತಿರಲಿ ಬುದ್ಧಿ ಮತ್ತು ಆಲೋಚನೆಯ ಮೂಲಕವೂ ಅವನ ಬಗೆಗಿನ ವಾಸ್ತವಿಕತೆಯನ್ನರಿಯಲು ಸಾಧ್ಯವಿಲ್ಲ.
2. ಅರ್ಥಾತ್- ಅವನು ಮೊತ್ತವನ್ನು ಮಾತ್ರವಲ್ಲದೆ ಸೂಕ್ಷ್ಮಾತಿ ಸೂಕ್ಷ್ಮ ವಿಷಯಗಳನ್ನೂ ಬಲ್ಲವನಾಗಿದ್ದಾನೆ. ಭೂತಳವನ್ನು ಸೇರುವ ಒಂದೊಂದು ಕಾಳು, ಭೂಮಿಯಿಂದ ಟಿಸಿಲೊಡೆಯುವ ಒಂದೊಂದೇ ಚಿಗುರು ಮತ್ತು ಮೊಳಕೆಯನ್ನೂ, ಆಕಾಶದಿಂದ ಸುರಿಯುವ ಮಳೆಯ ಒಂದೊಂದೇ ಹನಿಯನ್ನೂ, ಸಮುದ್ರ ಮತ್ತು ಸರೋವರಗಳಿಂದ ಆಕಾಶಕ್ಕೇರುವ ಆವಿಯ ಪ್ರಮಾಣವನ್ನೂ ಅವನು

ನೀವು ಮಾಡುವುದೆಲ್ಲವನ್ನೂ ಅವನು ನೋಡುತ್ತಿದ್ದಾನೆ.

يَعْرُجُ فِيهَا ۗ وَهُوَ مَعَكُمْ أَيْنَ مَا كُنتُمْ ۚ وَاللَّهُ بِمَا تَعْمَلُونَ بَصِيرٌ ٤

5. ಭೂಮಿ-ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಮತ್ತು ಸಕಲ ವಿಷಯಗಳು ತೀರ್ಮಾನಕ್ಕಾಗಿ ಅವನ ಕಡೆಗೆ ಮರಳಿಸಲ್ಪಡುತ್ತವೆ.

لَهُ مُلْكُ السَّمَاوَاتِ وَالْأَرْضِ ۚ وَإِلَى اللَّهِ تُرْجَعُ الْأُمُورُ ٥

6. ರಾತ್ರೆಯನ್ನು ಹಗಲಿನೊಳಗೂ ಹಗಲನ್ನು ರಾತ್ರೆಯೊಳಗೂ ಅವನೇ ಪೋಣಿಸುತ್ತಾನೆ. ಹೃದಯಗಳೊಳಗೆ ಅವಿತುಕೊಂಡಿರುವ ರಹಸ್ಯಗಳನ್ನೂ ಅವನು ಬಲ್ಲನು.

يُولِجُ اللَّيْلَ فِي النَّهَارِ وَيُولِجُ النَّهَارَ فِي اللَّيْلِ ۚ وَهُوَ عَلِيمٌ بِذَاتِ الصُّدُورِ ٦

7. ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಮೇಲೆ ವಿಶ್ವಾಸ ವಿರಿಸಿರಿ.[3] ಅವನು ಯಾವ ವಸ್ತುಗಳ ಮೇಲೆ ನಿಮ್ಮನ್ನು ಪ್ರತಿನಿಧಿಯಾಗಿ ಮಾಡಿರುವನೋ ಅವುಗಳಿಂದ ಖರ್ಚು ಮಾಡಿರಿ. ನಿಮ್ಮ ಪೈಕಿ ಸತ್ಯವಿಶ್ವಾಸ ಸ್ವೀಕರಿಸುವವರಿಗೆ ಮತ್ತು ಸಂಪತ್ತನ್ನು ಖರ್ಚು ಮಾಡುವವರಿಗೆ ಮಹಾ ಪ್ರತಿಫಲವಿದೆ.

آمِنُوا بِاللَّهِ وَرَسُولِهِ وَأَنفِقُوا مِمَّا جَعَلَكُم مُّسْتَخْلَفِينَ فِيهِ ۖ فَالَّذِينَ آمَنُوا مِنكُمْ وَأَنفَقُوا لَهُمْ أَجْرٌ كَبِيرٌ ٧

8. ನಿಮಗೇನಾಗಿದೆ? ಸಂದೇಶವಾಹಕನು ನಿಮಗೆ ನಿಮ್ಮ ಒಡೆಯನ ಮೇಲೆ ವಿಶ್ವಾಸವಿರಿಸಲು ಕರೆ ನೀಡುತ್ತಿದ್ದರೂ ನೀವು ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದಿಲ್ಲವೇಕೆ?[4] ನೀವು ನಿಜಕ್ಕೂ ವಿಶ್ವಾಸಿಗಳಾಗಿದ್ದರೆ ಅವನು ನಿಮ್ಮಿಂದ ವಚನ ಪಡೆದಿರುತ್ತಾನೆ.[5]

وَمَا لَكُمْ لَا تُؤْمِنُونَ بِاللَّهِ ۙ وَالرَّسُولُ يَدْعُوكُمْ لِتُؤْمِنُوا بِرَبِّكُمْ وَقَدْ أَخَذَ مِيثَاقَكُمْ إِن كُنتُم مُّؤْمِنِينَ ٨

9. ನಿಮ್ಮನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶದೆಡೆಗೆ ತರಲಿಕ್ಕಾಗಿ ತನ್ನ ದಾಸನ ಮೇಲೆ ಸುಸ್ಪಷ್ಟ ಸೂಕ್ತಗಳನ್ನು ಅವತೀರ್ಣಗೊಳಿಸುತ್ತಿರುವವನು ಅಲ್ಲಾಹನೇ ತಾನೆ. ವಾಸ್ತವದಲ್ಲಿ ಅಲ್ಲಾಹನು ನಿಮ್ಮ ಪಾಲಿಗೆ ಮಹಾ ವತ್ಸಲನೂ ಕರುಣಾಮಯಿಯೂ ಆಗಿರುತ್ತಾನೆ.

هُوَ الَّذِي يُنَزِّلُ عَلَىٰ عَبْدِهِ آيَاتٍ بَيِّنَاتٍ لِّيُخْرِجَكُم مِّنَ الظُّلُمَاتِ إِلَى النُّورِ ۚ وَإِنَّ اللَّهَ بِكُمْ لَرَءُوفٌ رَّحِيمٌ ٩

10. ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡದಿರಲು

وَمَا لَكُمْ أَلَّا تُنفِقُوا فِي سَبِيلِ اللَّهِ

ಬಲ್ಲವನಾಗಿದ್ದಾನೆ. ಯಾವ ಕಾಳು ಭೂಮಿಯ ಯಾವ ಪ್ರದೇಶದಲ್ಲಿ ಬಿದ್ದಿದೆ ಎಂಬುದು ಅವನಿಗೆ ತಿಳಿದಿದೆ. ಆದ್ದರಿಂದಲೇ ಅದನ್ನು ಸೀಳಿ ಮೊಳಕೆಯೊಡೆಯುವಂತೆ ಮಾಡಿ ಬೆಳೆಸಲು ಅವನಿಗೆ ಸಾಧ್ಯವಾಗುತ್ತದೆ. ಆವಿಯ ಎಷ್ಟು ಪ್ರಮಾಣ ಎಲ್ಲಿಂದ ಹೊರಟು ಎಲ್ಲಿಗೆ ತಲಪಿದೆ ಎಂದು ಅವನಿಗೆ ತಿಳಿದಿದೆ. ಆದ್ದರಿಂದಲೇ ಅವನು ಅದೆಲ್ಲವನ್ನೂ ಒಂದುಗೂಡಿಸಿ ಭೂಮಿಯ ವಿವಿಧ ಪ್ರದೇಶಗಳಲ್ಲಿ ಹರಡಿ ಪ್ರತಿಯೊಂದು ಕಡೆಯಲ್ಲೂ ನಿಶ್ಚಿತ ಪ್ರಮಾಣದಲ್ಲಿ ಮಳೆ ಸುರಿಸುತ್ತಾನೆ.

3. ಇಲ್ಲಿ ವಿಶ್ವಾಸವಿರಿಸುವುದೆಂದರೆ ಕೇವಲ ನಾಲಗೆಯ ಮೂಲಕ ಸತ್ಯವಿಶ್ವಾಸವನ್ನು ಪ್ರಕಟಿಸುವುದಲ್ಲ. ಬದಲಾಗಿ ಪ್ರಾಮಾಣಿಕ ಹೃದಯದಿಂದ ವಿಶ್ವಾಸವಿಡುವುದಾಗಿದೆ.
4. ಇಲ್ಲಿಯೂ ವಿಶ್ವಾಸವಿಡುವುದೆಂದರೆ ಪ್ರಾಮಾಣಿಕ ಹೃದಯದಿಂದ ವಿಶ್ವಾಸವಿಡುವುದಾಗಿದೆ.
5. ಅರ್ಥಾತ್- ಅನುಸರಣೆಯ ವಚನ.

ಕಾರಣವಾದರೂ ಏನು? ವಸ್ತುತಃ ಭೂಮಿ-ಆಕಾಶಗಳ ಉತ್ತರಾಧಿಕಾರವು ಅಲ್ಲಾಹನದೇ ಆಗಿದೆ.[6] ನಿಮ್ಮ ಪೈಕಿ ವಿಜಯ ಪ್ರಾಪ್ತಿಯ ಬಳಿಕ ಖರ್ಚು ಮಾಡುವವರು ಮತ್ತು ಹೋರಾಟ ನಡೆಸುವವರು, ವಿಜಯ ಪ್ರಾಪ್ತಿಗಿಂತ ಮುಂಚೆ ಖರ್ಚು ಮಾಡಿದವರಿಗೆ ಹಾಗೂ ಹೋರಾಟ ನಡೆಸಿದವರಿಗೆ ಸರಿಸಮಾನರಾಗಲಾರರು. ಅವರ ಪದವಿಯು ಅನಂತರ ಖರ್ಚು ಮಾಡಿದವರ ಹಾಗೂ ಹೋರಾಟ ನಡೆಸಿದವರಿಗಿಂತ ಉನ್ನತವಾಗಿದೆ. ಹಾಗಿದ್ದರೂ ಅಲ್ಲಾಹನು ಉಭಯತರಿಗೂ ಉತ್ತಮ ವಾಗ್ದಾನಗಳನ್ನಿತ್ತಿದ್ದಾನೆ.[7] ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಬಲ್ಲನು.

وَلِلّٰهِ مِيْرَاثُ السَّمٰوٰتِ وَالْاَرْضِ ؕ لَا يَسْتَوِىْ مِنْكُمْ مَّنْ اَنْفَقَ مِنْ قَبْلِ الْفَتْحِ وَقٰتَلَ ؕ اُولٰٓئِكَ اَعْظَمُ دَرَجَةً مِّنَ الَّذِيْنَ اَنْفَقُوْا مِنْۢ بَعْدُ وَقٰتَلُوْا ؕ وَكُلًّا وَّعَدَ اللّٰهُ الْحُسْنٰى ؕ وَاللّٰهُ بِمَا تَعْمَلُوْنَ خَبِيْرٌ ﴿۱۰﴾

ربع

11. ಅಲ್ಲಾಹನಿಗೆ ಸಾಲ ಕೊಡುವವನಾರಿದ್ದಾನೆ? ಅತ್ಯುತ್ತಮ ಸಾಲ. ಅಲ್ಲಾಹನು ಅದನ್ನು ಹಲವಾರು ಪಟ್ಟು ಹೆಚ್ಚಿಸಿಕೊಡುವನು ಮತ್ತು ಅವನಿಗೆ ಅತ್ಯುತ್ತಮ ಪ್ರತಿಫಲವಿದೆ.[8]

مَنْ ذَا الَّذِىْ يُقْرِضُ اللّٰهَ قَرْضًا حَسَنًا فَيُضٰعِفَهٗ لَهٗ وَلَهٗۤ اَجْرٌ كَرِيْمٌ ﴿۱۱﴾

12. ಅಂದು ನೀವು ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ನೋಡುವಾಗ ಅವರ ಪ್ರಕಾಶವು ಅವರ ಮುಂದೆಯೂ ಅವರ ಬಲಭಾಗದಲ್ಲೂ ಸಾಗುತ್ತಿರುವುದು.[9] (ಆಗ ಅವರೊಡನೆ) "ಇಂದು ನಿಮಗೆ ಶುಭವಾರ್ತೆ ಇದೆ" (ಎನ್ನಲಾಗುವುದು). ತಳಭಾಗದಲ್ಲಿ

يَوْمَ تَرَى الْمُؤْمِنِيْنَ وَالْمُؤْمِنٰتِ يَسْعٰى نُوْرُهُمْ بَيْنَ اَيْدِيْهِمْ وَبِاَيْمَانِهِمْ بُشْرٰىكُمُ الْيَوْمَ جَنّٰتٌ

6. ಇದಕ್ಕೆ ಎರಡು ಅರ್ಥಗಳಿವೆ. ಮೊದಲನೇಯದಾಗಿ ಈ ಸಂಪತ್ತು ನಿಮ್ಮ ಬಳಿ ಉಳಿಯುವಂತಹುದಲ್ಲ. ಒಂದು ದಿನ ನೀವು ಅದನ್ನು ಬಿಟ್ಟು ಹೋಗಲೇಬೇಕಾಗಿದೆ. ಕೊನೆಗೂ ಅಲ್ಲಾಹನೇ ಅದರ ವಾರೀಸುದಾರನಾಗಿರುತ್ತಾನೆ. ಎರಡನೆಯದಾಗಿ ಅಲ್ಲಾಹನ ಮಾರ್ಗದಲ್ಲಿ ಹಣವನ್ನು ವೆಚ್ಚ ಮಾಡುವಾಗ ನಿಮಗೆ ದಾರಿದ್ರ್ಯ ಮತ್ತು ಹಣದ ಮುಗ್ಗಟ್ಟಿನ ಬಗ್ಗೆ ಯಾವುದೇ ರೀತಿಯ ಶಂಕೆ ಹುಟ್ಟಬಾರದು. ಏಕೆಂದರೆ ಯಾವ ದೇವನಿಗಾಗಿ ನೀವು ಅದನ್ನು ವ್ಯಯಿಸುತ್ತಿದ್ದೀರೋ ಅವನು ಭೂಮಿ-ಆಕಾಶಗಳ ಎಲ್ಲ ಭಂಡಾರಗಳ ಒಡೆಯನಾಗಿದ್ದಾನೆ. ಅವನ ಬಳಿ ನಿಮಗೆ ಕೊಡಲು ಇಂದು ನಿಮಗೆ ನೀಡಲಾಗಿರುವುದಷ್ಟೇ ಇರುವುದಲ್ಲ. ಬದಲಾಗಿ ನಾಳೆ ಅವನು ನಿಮಗೆ ಅದಕ್ಕಿಂತ ಎಷ್ಟೋ ಹೆಚ್ಚು ಕೊಡಲಿಕ್ಕೂ ಅವನಿಂದ ಸಾಧ್ಯವಿದೆ.

7. ಸತ್ಯನಿಷೇಧ ಮತ್ತು ಸತ್ಯನಿಷೇಧಿಗಳ ಪ್ರಾಬಲ್ಯವಿದ್ದು ಇಸ್ಲಾಮಿನ ಮೇಲ್ಮೆಯ ಲಕ್ಷಣಗಳು ದೂರದೂರಕ್ಕೂ ಕಾಣಿಸದಂತೆ ಮೇಲ್ನೋಟಕ್ಕೆ ತೋರುವಂತಹ ಪರಿಸ್ಥಿತಿ ಇಸ್ಲಾಮಿಗೆ ಎದುರಾದರೆ- ಆ ಸಂದರ್ಭದಲ್ಲಿ ಇಸ್ಲಾಮನ್ನು ಬೆಂಬಲಿಸಲಿಕ್ಕಾಗಿ ಪ್ರಾಣದ ಹಂಗು ತೊರೆದು ಹೋರಾಡುವವರು, ಹಣ ವೆಚ್ಚ ಮಾಡುವವರು, ಉನ್ನತ ಸ್ಥಾನವನ್ನು ಹೊಂದಿದ್ದಾರೆ. ಇಸ್ಲಾಮ್ ಮತ್ತು ಸತ್ಯನಿಷೇಧದ ನಡುವಿನ ಹೋರಾಟದಲ್ಲಿ ತೀರ್ಮಾನ ಇಸ್ಲಾಮಿನ ಪರವಾಗಿ ಆದ ನಂತರ ತ್ಯಾಗಗಳನ್ನು ನೀಡುವವರಿಗೆ ಈ ಸ್ಥಾನ ಪ್ರಾಪ್ತವಾಗಲಾರದು.

8. ಒಬ್ಬ ವ್ಯಕ್ತಿ ಅಲ್ಲಾಹನು ದಯಪಾಲಿಸಿರುವ ಸಂಪತ್ತನ್ನು ಅವನ ಮಾರ್ಗದಲ್ಲಿ ವ್ಯಯಿಸಿದರೆ ಅವನು ಅದನ್ನು ತನಗೆ ನೀಡಲಾದ ಸಾಲವೆಂದು ಪರಿಗಣಿಸುತ್ತಾನೆ. ಇದು ಅಲ್ಲಾಹನ ಔದಾರ್ಯದ ಪರಮಾವಧಿಯಾಗಿದೆ. ಆದರೆ ಅದು 'ಅತ್ಯುತ್ತಮ ಸಾಲ' ಆಗಿರಬೇಕು. ಅರ್ಥಾತ್, ಪ್ರಾಮಾಣಿಕ ಮನಸ್ಸಿನೊಂದಿಗೆ ಯಾವುದೇ ಸ್ವಾರ್ಥ ಹಿತಾಸಕ್ತಿಯಿಲ್ಲದೆ ಅದನ್ನು ನೀಡಬೇಕು. ಈ ಸಾಲದ ಕುರಿತು ಅಲ್ಲಾಹನ ಎರಡು ವಾಗ್ದಾನಗಳಿವೆ. ಮೊದಲನೆಯದಾಗಿ ಅವನು ಅದನ್ನು ಅತ್ಯಧಿಕವಾಗಿ ವೃದ್ಧಿಸಿ ಮರಳಿಸುವನು. ಅಲ್ಲದೆ ಅದಕ್ಕಾಗಿ ಅವನು ತನ್ನ ವತಿಯಿಂದ ಅತ್ಯುತ್ತಮ ಪುಣ್ಯವನ್ನೂ ನೀಡುವನು.

9. ಇಲ್ಲಿ ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡಬಹುದು. ಪ್ರಕಾಶವು ಮುಂದಕ್ಕೆ ಹರಿಯುತ್ತದೆ ಎನ್ನುವುದು ಅರ್ಥವಾಗುತ್ತದೆ. ಆದರೆ ಅದು ಬಲಕ್ಕೆ ಹರಿಯುವುದು ಎಂದರೇನು? ಹಾಗಾದರೆ ಅವರ ಎಡಭಾಗದಲ್ಲಿ ಕತ್ತಲೆಯಿರುವುದೇ? ಇದರ ಉತ್ತರವೇನೆಂದರೆ ಒಬ್ಬ ವ್ಯಕ್ತಿ ಬಲಗೈಯಲ್ಲಿ ಬೆಳಕನ್ನು ಹಿಡಿದು ನಡೆಯುತ್ತಿದ್ದರೆ ಅದರಿಂದ ಎಡಭಾಗವೂ ಪ್ರಕಾಶಮಾನ ಗೊಳ್ಳುತ್ತದೆ. ಆದರೆ ಬೆಳಕು ಅವನ ಬಲಗೈಯಲ್ಲಿರುತ್ತದೆ ಎಂಬುದೇ ವಾಸ್ತವಿಕತೆಯಾಗಿದೆ.

ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿದ್ದು ಅವುಗಳಲ್ಲಿ ಅವರು ಸದಾಕಾಲ ವಾಸಿಸುವರು. ಇದುವೇ ಮಹಾ ಯಶಸ್ಸು.

تَجۡرِیۡ مِنۡ تَحۡتِهَا الۡاَنۡهٰرُ خٰلِدِیۡنَ
فِیۡهَا ؕ ذٰلِكَ هُوَ الۡفَوۡزُ الۡعَظِیۡمُ ﴿۱۲﴾

13. ಅಂದು ಕಪಟವಿಶ್ವಾಸಿಗಳಾದ ಪುರುಷರು ಮತ್ತು ಸ್ತ್ರೀಯರು ಸತ್ಯವಿಶ್ವಾಸಿಗಳೊಡನೆ- "ನಿಮ್ಮ ಪ್ರಕಾಶದಿಂದ ನಾವು ಒಂದಿಷ್ಟು ಪ್ರಯೋಜನ ಪಡೆಯುವಂತಾಗಲು ನೀವು ಸ್ವಲ್ಪ ನಮ್ಮ ಕಡೆಗೆ ನೋಡಿರಿ" ಎನ್ನುವರು. ಆದರೆ ಅವರೊಡನೆ, "ಹಿಂದಕ್ಕೆ ಸರಿಯಿರಿ, ನಿಮ್ಮ ಪ್ರಕಾಶವನ್ನು ಬೇರೆಲ್ಲಾದರೂ ಹುಡುಕಿಕೊಳ್ಳಿರಿ" ಎನ್ನಲಾಗುವುದು. ತರುವಾಯ ಅವರ ನಡುವೆ ಒಂದು ಅಡ್ಡಗೋಡೆಯನ್ನು ನಿರ್ಮಿಸಲಾಗುವುದು. ಅದರಲ್ಲಿ ಒಂದು ಬಾಗಿಲಿರುವುದು, ಆ ಬಾಗಿಲಿನ ಒಳಗೆ ಕರುಣೆಯೂ ಹೊರಗೆ ಯಾತನೆಯೂ ಇರುವುದು.

یَوۡمَ یَقُوۡلُ الۡمُنٰفِقُوۡنَ وَ الۡمُنٰفِقٰتُ
لِلَّذِیۡنَ اٰمَنُوا انۡظُرُوۡنَا نَقۡتَبِسۡ مِنۡ
نُّوۡرِکُمۡ ۚ قِیۡلَ ارۡجِعُوۡا وَرَآءَکُمۡ
فَالۡتَمِسُوۡا نُوۡرًا ؕ فَضُرِبَ بَیۡنَهُمۡ بِسُوۡرٍ
لَّهٗ بَابٌ ؕ بَاطِنُهٗ فِیۡهِ الرَّحۡمَةُ وَظَاهِرُهٗ
مِنۡ قِبَلِهِ الۡعَذَابُ ﴿۱۳﴾

14. ಅವರು ಸತ್ಯವಿಶ್ವಾಸಿಗಳನ್ನು ಕೂಗಿ ಕರೆಯುತ್ತ, "ನಾವು ನಿಮ್ಮ ಜೊತೆಗಿರಲಿಲ್ಲವೇ?" ಎಂದು ಕೇಳುವರು. ಆಗ ಸತ್ಯವಿಶ್ವಾಸಿಗಳು- "ಹೌದು, ಆದರೆ ಸ್ವತಃ ನೀವೇ ನಿಮ್ಮನ್ನು ವಂಚನೆಗೆ ಸಿಲುಕಿಸಿಕೊಂಡಿರಿ, ಸಂದರ್ಭ ಸಾಧಕತನವನ್ನು ತೋರಿದಿರಿ, ಸಂಶಯಗ್ರಸ್ತರಾದಿರಿ ಮತ್ತು ಹುಸಿ ನಿರೀಕ್ಷೆಗಳು ನಿಮ್ಮನ್ನು ಮೋಸಗೊಳಿಸುತ್ತಿದ್ದುವು. ಕೊನೆಗೆ ಅಲ್ಲಾಹನ ತೀರ್ಪು ಬಂದೇ ಬಿಟ್ಟಿತು ಮತ್ತು ಆ ಮಹಾವಂಚಕನು (ಶೈತಾನನು) ಕೊನೆಯ ವರೆಗೂ ಅಲ್ಲಾಹನ ವಿಷಯದಲ್ಲಿ ನಿಮ್ಮನ್ನು ವಂಚಿಸುತ್ತಲೇ ಇದ್ದನು.

یُنَادُوۡنَهُمۡ اَلَمۡ نَکُنۡ مَّعَکُمۡ ؕ قَالُوۡا بَلٰی
وَلٰکِنَّکُمۡ فَتَنۡتُمۡ اَنۡفُسَکُمۡ وَتَرَبَّصۡتُمۡ
وَارۡتَبۡتُمۡ وَغَرَّتۡکُمُ الۡاَمَانِیُّ حَتّٰی جَآءَ
اَمۡرُ اللّٰهِ وَغَرَّکُمۡ بِاللّٰهِ الۡغَرُوۡرُ ﴿۱۴﴾

15. ಆದುದರಿಂದ ಇಂದು ನಿಮ್ಮಿಂದಾಗಲಿ, ಸತ್ಯವನ್ನು ಬಹಿರಂಗವಾಗಿ ನಿಷೇಧಿಸಿದ್ದವರಿಂದಾಗಲಿ ಯಾವ ಪರಿಹಾರವನ್ನೂ ಸ್ವೀಕರಿಸಲಾಗದು. ನರಕವು ನಿಮ್ಮ ನಿವಾಸವಾಗಿದೆ. ಅದುವೇ ನಿಮ್ಮ ಮೇಲ್ವಿಚಾರಕ ಮತ್ತು ಇದು ಅತ್ಯಂತ ಕೆಟ್ಟ ಗತಿಯಾಗಿದೆ."

فَالۡیَوۡمَ لَا یُؤۡخَذُ مِنۡکُمۡ فِدۡیَةٌ وَّلَا
مِنَ الَّذِیۡنَ کَفَرُوۡا ؕ مَاۡوٰىکُمُ النَّارُ ؕ
هِیَ مَوۡلٰىکُمۡ ؕ وَبِئۡسَ الۡمَصِیۡرُ ﴿۱۵﴾

16. ಸತ್ಯವಿಶ್ವಾಸಿಗಳಿಗೆ,[10] ಅವರ ಹೃದಯವು ಅಲ್ಲಾಹನ ಸ್ಮರಣೆಯಿಂದ ಕರಗುವ ಹಾಗೂ ಅವನಿಂದ ಅವತೀರ್ಣಗೊಂಡ ಸತ್ಯದ ಮುಂದೆ ಬಾಗುವ ಕಾಲವಿನ್ನೂ ಬರಲಿಲ್ಲವೇ? ಮತ್ತು ಅವರು ಈ ಹಿಂದೆ ಗ್ರಂಥ ನೀಡಲ್ಪಟ್ಟವರಂತಾಗಬಾರದು. (ಗ್ರಂಥ ನೀಡಲ್ಪಟ್ಟು) ಒಂದು ದೀರ್ಘಕಾಲ ಕಳೆದ ಬಳಿಕ ಅವರ ಹೃದಯಗಳು ಕಠಿಣವಾದುವು ಮತ್ತು ಇಂದು ಅವರಲ್ಲಿ ಹೆಚ್ಚಿನವರು ಕರ್ಮಭ್ರಷ್ಟರಾಗಿರುವರು.

اَلَمۡ یَاۡنِ لِلَّذِیۡنَ اٰمَنُوۡۤا اَنۡ تَخۡشَعَ
قُلُوۡبُهُمۡ لِذِکۡرِ اللّٰهِ وَمَا نَزَلَ مِنَ
الۡحَقِّ ۙ وَلَا یَکُوۡنُوۡا کَالَّذِیۡنَ اُوۡتُوا
الۡکِتٰبَ مِنۡ قَبۡلُ فَطَالَ عَلَیۡهِمُ
الۡاَمَدُ فَقَسَتۡ قُلُوۡبُهُمۡ ؕ وَکَثِیۡرٌ
مِّنۡهُمۡ فٰسِقُوۡنَ ﴿۱۶﴾

10. ಇಲ್ಲಿ "ಸತ್ಯವಿಶ್ವಾಸಿಗಳು" ಎಂದರೆ ಎಲ್ಲಾ ಸತ್ಯವಿಶ್ವಾಸಿಗಳಲ್ಲ. ಬದಲಾಗಿ ಸತ್ಯವಿಶ್ವಾಸ ಸ್ವೀಕರಿಸುವ ಸಂಕಲ್ಪ ಮಾಡಿ ಪ್ರವಾದಿವರ್ಯರನ್ನು(ಸ) ನಂಬುವವರ ಕೂಟದಲ್ಲಿ ಸೇರಿಯೂ ಹೃದಯದಲ್ಲಿ ಇಸ್ಲಾಮಿನ ಬಗೆಗಿನ ಕಳಕಳಿಯನ್ನು ಹೊಂದಿರದಂತಹ ಮುಸ್ಲಿಮರ ನಿರ್ದಿಷ್ಟ ಸಮೂಹವಾಗಿದೆ.

17. ಚೆನ್ನಾಗಿ ತಿಳಿದುಕೊಳ್ಳಿರಿ. ಅಲ್ಲಾಹನು ಭೂಮಿಯನ್ನು, ಅದು ಸತ್ತ ಬಳಿಕ ಜೀವಂತ ಗೊಳಿಸುತ್ತಾನೆ.[11] ನೀವು ವಿವೇಚಿಸಬಹುದೆಂದು ನಾವು ನಿಮಗೆ ನಿದರ್ಶನಗಳನ್ನು ಸುವ್ಯಕ್ತವಾಗಿ ತೋರಿಸಿ ಕೊಟ್ಟಿದ್ದೇವೆ.

اِعْلَمُوْٓا اَنَّ اللّٰهَ يُحْيِ الْاَرْضَ بَعْدَ مَوْتِهَا ۭ قَدْ بَيَّنَّا لَكُمُ الْاٰيٰتِ لَعَلَّكُمْ تَعْقِلُوْنَ ⑰

18. ಪುರುಷರಲ್ಲೂ ಸ್ತ್ರೀಯರಲ್ಲೂ ದಾನಧರ್ಮ[12] ಮಾಡುವವರಿಗೆ ಮತ್ತು ಅಲ್ಲಾಹನಿಗೆ ಶ್ರೇಷ್ಠ ಸಾಲವನ್ನು ನೀಡಿದವರಿಗೆ ಖಂಡಿತ ವಾಗಿಯೂ ಎಷ್ಟೋ ಪಟ್ಟು ವರ್ಧಿಸಿ ಕೊಡಲಾಗುವುದು. ಅವರಿಗೆ ಅತ್ಯುತ್ತಮ ಪ್ರತಿಫಲವಿದೆ.

اِنَّ الْمُصَّدِّقِيْنَ وَالْمُصَّدِّقٰتِ وَاَقْرَضُوا اللّٰهَ قَرْضًا حَسَنًا يُّضٰعَفُ لَهُمْ وَلَهُمْ اَجْرٌ كَرِيْمٌ ⑱

19. ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸ ವಿರಿಸಿದವರೇ ತಮ್ಮ ಪ್ರಭುವಿನ ಬಳಿ ಸಿದ್ದೀಕ್[13] (ಸತ್ಯಸಂಧರು) ಮತ್ತು ಶಹೀದ್[14] (ಹುತ್ಮಾತರು) ಆಗಿರುತ್ತಾರೆ. ಅವರಿಗೆ ಅವರ ಸತ್ಫಲವೂ ಅವರ ಪ್ರಕಾಶವೂ ಇದೆ. ಸತ್ಯಧಿಕ್ಕಾರಿಗಳು ಮತ್ತು ನಮ್ಮ ಸೂಕ್ತಗಳನ್ನು ತಿರಸ್ಕರಿಸಿದವರು ನರಕದವರಾಗಿದ್ದಾರೆ.

وَالَّذِيْنَ اٰمَنُوْا بِاللّٰهِ وَرُسُلِهٖٓ اُولٰۗىِٕكَ هُمُ الصِّدِّيْقُوْنَ ڰ وَالشُّهَدَاۗءُ عِنْدَ رَبِّهِمْ ۭ لَهُمْ اَجْرُهُمْ وَنُوْرُهُمْ ۭ وَالَّذِيْنَ كَفَرُوْا وَكَذَّبُوْا بِاٰيٰتِنَآ اُولٰۗىِٕكَ اَصْحٰبُ الْجَحِيْمِ ⑲

20. ಚೆನ್ನಾಗಿ ತಿಳಿದುಕೊಳ್ಳಿರಿ! ಈ ಲೌಕಿಕ ಜೀವನವು ಕೇವಲ ಒಂದು ಆಟ, ವಿನೋದ, ತೋರಿಕೆಯ ವೈಭವ, ಪರಸ್ಪರರ ಮೇಲೆ ಹಿರಿಮೆ ಸಾಧಿಸುವ ಪ್ರಯತ್ನ ಮತ್ತು ಸಂಪತ್ತು ಹಾಗೂ ಸಂತಾನದ ವಿಷಯದಲ್ಲಿ ಪರಸ್ಪರರನ್ನು ಮೀರಿ ಹೋಗುವ

اِعْلَمُوْٓا اَنَّمَا الْحَيٰوةُ الدُّنْيَا لَعِبٌ وَّلَهْوٌ وَّزِيْنَةٌ وَّتَفَاخُرٌۢ بَيْنَكُمْ وَتَكَاثُرٌ فِي الْاَمْوَالِ وَالْاَوْلَادِ ۭ كَمَثَلِ

11. ಇಲ್ಲಿ ಯಾವ ಹಿನ್ನೆಲೆಯಿಂದ ಈ ಮಾತು ಹೇಳಲಾಗಿದೆ ಎಂಬುದನ್ನು ಚೆನ್ನಾಗಿ ಮನನ ಮಾಡಿ ಕೊಳ್ಳಬೇಕು. ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿ ಪ್ರವಾದಿತ್ವ ಮತ್ತು ಗ್ರಂಥ ಅವತೀರ್ಣಗೊಂಡುದನ್ನು ಮಳೆಯ ಸಮೃದ್ಧಿಯೊಂದಿಗೆ ಹೋಲಿಸಲಾಗಿದೆ. ಏಕೆಂದರೆ ಅದರಿಂದ ಮಾನವಕುಲದ ಮೇಲೆ, ಮಳೆಯಿಂದ ಭೂಮಿಯ ಮೇಲಾಗುವ ಪರಿಣಾಮವೇ ಉಂಟಾಗುತ್ತದೆ. ಮಳೆಯಿಂದಾಗಿ ಸ್ವಲ್ಪವಾದರೂ ಫಲವತ್ತತೆ ಇರುವ ಭೂಮಿ ಹಸಿರಿನಿಂದ ಕಂಗೊಳಿಸುತ್ತದೆ. ಆದರೆ ಬಂಜರು ನೆಲ ಮೊದಲಿನಂತೆಯೇ ಬಂಜರಾಗಿಯೇ ಬಿದ್ದಿರುತ್ತದೆ.

12. ಉರ್ದು ಭಾಷೆಯಲ್ಲಿ 'ಸದಕ' ಎಂಬ ಪದ ಬಹಳ ಕೆಟ್ಟ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಆದರೆ ಇಸ್ಲಾಮೀ ಪಾರಿಭಾಷಿಕದಲ್ಲಿ ಪ್ರಾಮಾಣಿಕ ಹೃದಯ ಮತ್ತು ಶುದ್ಧಮನಸ್ಸಿನೊಂದಿಗೆ ಅಲ್ಲಾಹನ ಸಂಪ್ರೀತಿಗಾಗಿ ಮಾತ್ರ ನೀಡಲಾಗುವ, ಯಾವುದೇ ರೀತಿಯ ತೋರಿಕೆ ಅಥವಾ ಉಪಕಾರಭಾರದ ಭಾವವಿಲ್ಲದ ದಾನಕ್ಕೆ ಈ ಪದ ಬಳಕೆಯಾಗುತ್ತದೆ.

13. 'ಸಿದ್ದೀಕ್' ಎಂಬುದು 'ಸಿದ್ಕ್'ನ ಅತಿಶಯ ರೂಪವಾಗಿದೆ. ಸಾದಿಕ್ ಎಂದರೆ ಸತ್ಯವಂತ. ಸಿದ್ದೀಕ್ ಎಂದರೆ ಪರಮ ಸತ್ಯವಂತ. ಅರ್ಥಾತ್ ಯಾವುದೇ ರೀತಿಯ ಹುಳುಕಿಲ್ಲದ, ಸತ್ಯ ಮತ್ತು ಸನ್ಮಾರ್ಗದಿಂದ ಎಂದೂ ವಿಚಲಿತನಾಗದ, ತನ್ನ ಮನಸ್ಸಾಕ್ಷಿಯ ವಿರುದ್ಧ ಮಾತನಾಡಿಯಾನೆಂದು ಕಲ್ಪಿಸಲಿಕ್ಕೂ ಸಾಧ್ಯವಾಗದ, ಯಾವುದೇ ವಿಷಯವನ್ನು ನಂಬಿದರೆ ಪ್ರಾಮಾಣಿಕ ಸಂಕಲ್ಪದೊಂದಿಗೆ ನಂಬುವ, ಅದರ ಮೇಲಿನ ನಿಷ್ಠೆಯ ಬೇಡಿಕೆಗಳನ್ನು ಈಡೇರಿಸುವ ಮತ್ತು ಓರ್ವ ನಂಬಿಗಸ್ಥ ನಿಜವಾಗಿ ಇರಬೇಕಾದ ರೀತಿಯಲ್ಲಿ ತಾನಿದ್ದೇನೆಂದು ತನ್ನ ಕರ್ಮದಿಂದ ಸಾಬೀತುಪಡಿಸುವ ವ್ಯಕ್ತಿಯಾಗಿದ್ದಾನೆ.

14. 'ಶಹೀದ್' ಎಂದರೆ ಇಲ್ಲಿ ತನ್ನ ಮಾತು ಮತ್ತು ಕೃತಿಯ ಮೂಲಕ ಸತ್ಯದ ಸಾಕ್ಷ್ಯ ವಹಿಸುವವನಾಗಿದ್ದಾನೆ.

ಪೈಪೋಟಿ ಮಾತ್ರವಲ್ಲದೆ ಇನ್ನೇನೂ ಅಲ್ಲ. ಇದರ ಉಪಮೆ ಹೀಗಿದೆ, ಒಂದು ಮಳೆ ಬಂದೊಡನೆ ಅದರಿಂದಾಗಿ ಹುಟ್ಟುವ ಸಸ್ಯಗಳನ್ನು ಕಂಡು ಕೃಷಿಕರು ಸಂತೋಷಗೊಂಡರು. ತರುವಾಯ ಅದೇ ಬೆಳೆಯು ಬಲಿತಾಗ ಅದು ಹಳದಿಯಾಗಿ ಬಿಟ್ಟದ್ದನ್ನು ನೀವು ಕಾಣುತ್ತೀರಿ. ಅನಂತರ ಅದು ಹೊಟ್ಟಾಗಿ ಬಿಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಪರಲೋಕವು ಕಠಿಣ ಯಾತನೆ ಇರುವ ಮತ್ತು ಅಲ್ಲಾಹನ ಕ್ಷಮೆ ಹಾಗೂ ಸಂಪ್ರೀತಿ ಇರುವ ಸ್ಥಳವಾಗಿದೆ. ಲೌಕಿಕ ಜೀವನವು ಒಂದು ವಂಚನೆಯ ಸಾಧನವಲ್ಲದೆ ಮತ್ತೇನೂ ಅಲ್ಲ.

غَيْثٍ اَعْجَبَ الْكُفَّارَ نَبَاتُهٗ ثُمَّ يَهِيْجُ
فَتَرٰىهُ مُصْفَرًّا ثُمَّ يَكُوْنُ حُطَامًا ؕ
وَ فِى الْاٰخِرَةِ عَذَابٌ شَدِيْدٌ ۙ وَّ مَغْفِرَةٌ
مِّنَ اللّٰهِ وَ رِضْوَانٌ ؕ وَ مَا الْحَيٰوةُ
الدُّنْيَآ اِلَّا مَتَاعُ الْغُرُوْرِ ﴿۲۰﴾

21. ಧಾವಿಸಿರಿ ಮತ್ತು ನಿಮ್ಮ ಪ್ರಭುವಿನ ಕ್ಷಮೆ ಹಾಗೂ ಭೂಮಿ-ಆಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸುವಲ್ಲಿ ಪರಸ್ಪರ ಸ್ಪರ್ಧಿಸಿರಿ.[15] ಅದನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದವರಿಗಾಗಿ ಸಿದ್ಧಗೊಳಿಸಲಾಗಿದೆ. ಇದು ಅಲ್ಲಾಹನ ಅನುಗ್ರಹ. ಅವನಿದನ್ನು ತಾನಿಚ್ಛಿಸಿದವರಿಗೆ ನೀಡುತ್ತಾನೆ ಮತ್ತು ಅಲ್ಲಾಹನು ಮಹಾ ಅನುಗ್ರಹಶಾಲಿಯಾಗಿದ್ದಾನೆ.

سَابِقُوْٓا اِلٰى مَغْفِرَةٍ مِّنْ رَّبِّكُمْ وَ جَنَّةٍ
عَرْضُهَا كَعَرْضِ السَّمَآءِ وَ الْاَرْضِ ۙ
اُعِدَّتْ لِلَّذِيْنَ اٰمَنُوْا بِاللّٰهِ وَ رُسُلِهٖ ؕ
ذٰلِكَ فَضْلُ اللّٰهِ يُؤْتِيْهِ مَنْ يَّشَآءُ ؕ
وَ اللّٰهُ ذُو الْفَضْلِ الْعَظِيْمِ ﴿۲۱﴾

22. ಭೂಮಿಯ ಮೇಲೆ ಅಥವಾ ನಿಮ್ಮ ಮೇಲೆ ಎರಗುವ ಯಾವ ಸಂಕಷ್ಟವೂ ನಾವು ಅದನ್ನು ಸೃಷ್ಟಿಸುವುದಕ್ಕೆ ಮುಂಚೆ ಒಂದು ಗ್ರಂಥದಲ್ಲಿ (ವಿಧಿ ಲಿಖಿತದಲ್ಲಿ) ಬರೆದಿಟ್ಟುಕೊಳ್ಳದೆ ಇಲ್ಲ. ಖಂಡಿತವಾಗಿಯೂ ಹೀಗೆ ಮಾಡುವುದು ಅಲ್ಲಾಹನಿಗೆ ಅತ್ಯಂತ ಸುಲಭ ಕಾರ್ಯವಾಗಿದೆ.

مَآ اَصَابَ مِنْ مُّصِيْبَةٍ فِى الْاَرْضِ
وَ لَا فِيْٓ اَنْفُسِكُمْ اِلَّا فِيْ كِتٰبٍ مِّنْ قَبْلِ
اَنْ نَّبْرَاَهَا ؕ اِنَّ ذٰلِكَ عَلَى اللّٰهِ يَسِيْرٌ ۚۖ ﴿۲۲﴾

23. (ಹೀಗೇಕೆಂದರೆ) ನಿಮಗುಂಟಾಗುವ ಯಾವುದೇ ನಷ್ಟಕ್ಕಾಗಿ ನೀವು ಖೇದಿಸಬಾರದು ಮತ್ತು ಅಲ್ಲಾಹನು ನಿಮಗೆ ಏನನ್ನು ದಯಪಾಲಿಸಿರುವನೋ ಅದರ ಬಗ್ಗೆ ಹಿಗ್ಗಬಾರದು. ಅಲ್ಲಾಹನು ಆತ್ಮಪ್ರಶಂಸಕರನ್ನು ಮತ್ತು ದುರಭಿಮಾನಿಗಳನ್ನು ಮೆಚ್ಚುವುದಿಲ್ಲ.

لِّكَيْلَا تَاْسَوْا عَلٰى مَا فَاتَكُمْ وَ لَا تَفْرَحُوْا
بِمَآ اٰتٰىكُمْ ؕ وَ اللّٰهُ لَا يُحِبُّ كُلَّ
مُخْتَالٍ فَخُوْرِ ۙ ﴿۲۳﴾

24. ಅವರು ಸ್ವತಃ ಜಿಪುಣತೆ ತೋರುತ್ತಾರೆ ಮತ್ತು ಇತರರನ್ನು ಜಿಪುಣತೆಗೆ ಪ್ರೇರೇಪಿಸುತ್ತಾರೆ. ಇನ್ನು ಯಾರಾದರೂ ವಿಮುಖರಾಗುತ್ತಾರಾದರೆ, ಅಲ್ಲಾಹನು ನಿರಪೇಕ್ಷನೂ ಸ್ತುತ್ಯರ್ಹನೂ ಆಗಿರುತ್ತಾನೆ.

اَلَّذِيْنَ يَبْخَلُوْنَ وَ يَاْمُرُوْنَ النَّاسَ
بِالْبُخْلِ ؕ وَ مَنْ يَّتَوَلَّ فَاِنَّ اللّٰهَ
هُوَ الْغَنِيُّ الْحَمِيْدُ ﴿۲۴﴾

15. ಈ ಸೂಕ್ತವನ್ನು ಸೂರಃ ಆಲಿ ಇಮ್ರಾನ್‌ನ 133ನೆಯ ಸೂಕ್ತದೊಂದಿಗೆ ಸೇರಿಸಿ ಓದಿದರೆ ಮನಸ್ಸಿನಲ್ಲಿ ಮೂಡುವ ಚಿತ್ರಣವೇನೆಂದರೆ- ಸ್ವರ್ಗದಲ್ಲಿ ಮನುಷ್ಯನಿಗೆ ಸಿಗುವ ಉದ್ಯಾನ ಮತ್ತು ಅರಮನೆಗಳು ಅವನ ನಿವಾಸಸ್ಥಳ ಮಾತ್ರವಾಗಿರುವುದು. ಉಳಿದಂತೆ ಸಮಸ್ತ ನಿಸರ್ಗ ಅವನ ವಿಹಾರ ಕ್ಷೇತ್ರವಾಗಿರುವುದು.

25. ನಾವು ನಮ್ಮ ಸಂದೇಶವಾಹಕರನ್ನು ಸುವ್ಯಕ್ತ ನಿದರ್ಶನಗಳು ಮತ್ತು ಸನ್ಮಾರ್ಗದರ್ಶನದೊಂದಿಗೆ ಕಳುಹಿಸಿದೆವು. ಜನರು ನ್ಯಾಯದಲ್ಲಿ ಸ್ಥಿರವಾಗಿ ನಿಲ್ಲಲೆಂದು ಅವರ ಜೊತೆ ಗ್ರಂಥ ಮತ್ತು ತಕ್ಕಡಿಯನ್ನು ಅವತೀರ್ಣಗೊಳಿಸಿದೆವು[16] ಮತ್ತು ನಾವು ಕಬ್ಬಿಣವನ್ನು ಅವತೀರ್ಣಗೊಳಿಸಿದೆವು. ಅದರಲ್ಲಿ ಭಾರೀ ಶಕ್ತಿ ಇದೆ ಮತ್ತು ಜನರಿಗೆ ಪ್ರಯೋಜನಗಳಿವೆ.[17] ಯಾರು ಅಲ್ಲಾಹನನ್ನು ಕಾಣದೆಯೇ ಅವನಿಗೆ ಹಾಗೂ ಅವನ ಸಂದೇಶವಾಹಕರಿಗೆ ನೆರವಾಗುತ್ತಾರೆಂಬುದನ್ನು ಅಲ್ಲಾಹನು ತಿಳಿಯುವಂತಾಗಲು ಹೀಗೆ ಮಾಡಲಾಗಿದೆ. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಬಲಿಷ್ಠನೂ ಅಜೇಯನೂ ಆಗಿರುತ್ತಾನೆ.

لَقَدۡ اَرۡسَلۡنَا رُسُلَنَا بِالۡبَيِّنٰتِ وَ
اَنۡزَلۡنَا مَعَهُمُ الۡكِتٰبَ وَالۡمِيۡزَانَ لِيَقُوۡمَ
النَّاسُ بِالۡقِسۡطِ‌ۚ وَاَنۡزَلۡنَا الۡحَدِيۡدَ
فِيۡهِ بَاۡسٌ شَدِيۡدٌ وَّمَنَافِعُ لِلنَّاسِ
وَلِيَعۡلَمَ اللّٰهُ مَنۡ يَّنۡصُرُهٗ وَرُسُلَهٗ
بِالۡغَيۡبِ‌ؕ اِنَّ اللّٰهَ قَوِىٌّ عَزِيۡزٌ ﴿۲۵﴾

26. ನಾವು ನೂಹರನ್ನೂ ಇಬ್‌ರಾಹೀಮರನ್ನೂ ರವಾನಿಸಿದೆವು ಮತ್ತು ಅವರಿಬ್ಬರ ಸಂತತಿಯಲ್ಲಿ ಪ್ರವಾದಿತ್ವವನ್ನೂ ಗ್ರಂಥವನ್ನೂ ಇರಿಸಿದೆವು. ತರುವಾಯ ಅವರ ಸಂತತಿಯಲ್ಲಿ ಕೆಲವರು ಸನ್ಮಾರ್ಗ ಸ್ವೀಕಾರ ಮಾಡಿದರೆ ಹೆಚ್ಚಿನವರು ಕರ್ಮಭ್ರಷ್ಟರಾದರು.

وَلَقَدۡ اَرۡسَلۡنَا نُوۡحًا وَّاِبۡرٰهِيۡمَ وَ
جَعَلۡنَا فِىۡ ذُرِّيَّتِهِمَا النُّبُوَّةَ وَالۡكِتٰبَ
فَمِنۡهُمۡ مُّهۡتَدٍ‌ۚ وَكَثِيۡرٌ مِّنۡهُمۡ فٰسِقُوۡنَ ﴿۲۶﴾

27. ಅವರ ಬಳಿಕ ನಾವು ಒಬ್ಬರ ನಂತರ ಒಬ್ಬರಂತೆ ಸಂದೇಶವಾಹಕರನ್ನು ಕಳುಹಿಸಿದೆವು ಮತ್ತು ಅವರೆಲ್ಲರ ಬಳಿಕ ಮರ್ಯಮರ ಪುತ್ರ ಈಸಾರನ್ನು ಕಳುಹಿಸಿದೆವು. ಅವರಿಗೆ ಇಂಜೀಲನ್ನು ದಯಪಾಲಿಸಿದೆವು. ಅವರ ಅನುಯಾಯಿಗಳ ಹೃದಯಗಳಲ್ಲಿ ನಾವು ಅನುಕಂಪ ಮತ್ತು ಕರುಣೆಯನ್ನಿಟ್ಟೆವು ಮತ್ತು ಸನ್ಯಾಸವನ್ನು[18]

ثُمَّ قَفَّيۡنَا عَلٰٓى اٰثَارِهِمۡ بِرُسُلِنَا
وَقَفَّيۡنَا بِعِيۡسَى ابۡنِ مَرۡيَمَ وَاٰتَيۡنٰهُ
الۡاِنۡجِيۡلَ ۙ وَجَعَلۡنَا فِىۡ قُلُوۡبِ
الَّذِيۡنَ اتَّبَعُوۡهُ رَاۡفَةً وَّرَحۡمَةً ؕ

16. ಈ ಸಂಕ್ಷಿಪ್ತ ವಾಕ್ಯದಲ್ಲಿ ಪ್ರವಾದಿಗಳ ಜೀವಿತೋದ್ದೇಶದ ಸಮಗ್ರ ಸಾರಾಂಶವನ್ನು ಮುಂದಿಡಲಾಗಿದೆ. ಲೋಕದಲ್ಲಿ ಅಲ್ಲಾಹನ ಕಡೆಯಿಂದ ಬಂದ ಪ್ರವಾದಿಗಳೆಲ್ಲರೂ ಮೂರು ವಸ್ತುಗಳೊಂದಿಗೆ ಬಂದಿದ್ದರು. 1) ಬಯ್ಯಿನಾತ್ - ಅರ್ಥಾತ್, ಸುಸ್ಪಷ್ಟ ನಿದರ್ಶನಗಳು, ಸುವ್ಯಕ್ತ ಸಾಕ್ಷ್ಯಾಧಾರಗಳು ಮತ್ತು ಸುಸ್ಪಷ್ಟ ಮಾರ್ಗದರ್ಶನಗಳು. 2) ಗ್ರಂಥ - ಜನರು ಮಾರ್ಗದರ್ಶನಕ್ಕಾಗಿ ಅದರತ್ತಲೇ ತಿರುಗಲೆಂದು ಮಾನವನ ಮಾರ್ಗದರ್ಶನಕ್ಕೆ ಅಗತ್ಯವಿರುವ ಎಲ್ಲಾ ಬೋಧನೆಗಳನ್ನು ಅದರಲ್ಲಿ ದಾಖಲಿಸಲಾಗಿದೆ. 3) ತಕ್ಕಡಿ - ಅರ್ಥಾತ್ ಸತ್ಯ-ಮಿಥ್ಯದ ಮಾನದಂಡ. ಅದು ತಕ್ಕಡಿಯಂತೆ ತೂಗಿ- ವಿಚಾರ, ಚಾರಿತ್ರ್ಯ ಮತ್ತು ವ್ಯವಹಾರಗಳಲ್ಲಿ ಏರು-ತಗ್ಗುಗಳ ವಿಭಿನ್ನ ಅತಿರೇಕಗಳ ನಡುವೆ ನ್ಯಾಯಸಮ್ಮತವಾದ ವಿಷಯ ಯಾವುದು ಎಂಬುದನ್ನು ತಿಳಿಸುತ್ತದೆ.

17. ಪ್ರವಾದಿಗಳ(ಅ) ಜೀವಿತೋದ್ದೇಶವನ್ನು ವರ್ಣಿಸಲಾದ ತಕ್ಷಣ ಇದನ್ನು ಹೇಳಲಾಗಿದೆ. ಇಲ್ಲಿ ಕಬ್ಬಿಣವೆಂದು ರಾಜಕೀಯ ಮತ್ತು ಯುದ್ಧದ ಸಾಮರ್ಥ್ಯಕ್ಕೆ ಹೇಳಲಾಗಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಮಾತಿನ ಇಂಗಿತವೇನೆಂದರೆ, ಅಲ್ಲಾಹನು ಪ್ರವಾದಿಗಳನ್ನು ನ್ಯಾಯ ಸಂಸ್ಥಾಪನೆಯ ಯೋಜನೆಯೊಂದನ್ನು ಮುಂದಿಡಲಿಕ್ಕಾಗಿ ಮಾತ್ರ ಕಳುಹಿಸಲಿಲ್ಲ. ಅದನ್ನು ವ್ಯಾವಹಾರಿಕವಾಗಿ ಜಾರಿಗೊಳಿಸಲು ಪ್ರಯತ್ನಿಸುವುದು, ನಿಜಾರ್ಥದಲ್ಲಿ ನ್ಯಾಯದ ಸಂಸ್ಥಾಪನೆಯಾಗಲು ಬೇಕಾದ ಶಕ್ತಿಯನ್ನು ಒದಗಿಸುವುದು, ಆ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವವರನ್ನು ಶಿಕ್ಷಿಸುವ ಮತ್ತು ಅದನ್ನು ವಿರೋಧಿಸುವವರ ಬಲ ಮುರಿಯುವ ರೀತಿಯಲ್ಲಿ ಪ್ರಯತ್ನಿಸುವುದೆಲ್ಲವೂ ಅವರ ಜೀವಿತೋದ್ದೇಶದಲ್ಲಿ ಸೇರಿತ್ತು.

18. 'ರಹ್‌ಬಾನಿಯತ್' (ಸನ್ಯಾಸ) ಎಂದರೆ ಲೋಕ ಪರಿತ್ಯಾಗಿಯಾಗುವುದು. ಲೌಕಿಕ ಜೀವನದಿಂದ ಪಲಾಯನ ಮಾಡಿ ವನ-ಪರ್ವತಗಳಲ್ಲಿ ಆಶ್ರಯ ಪಡೆಯುವುದು ಅಥವಾ ಏಕಾಂತವಾಸ ಕೈಗೊಳ್ಳುವುದು.

ಅವರು ತಾವೇ ಆವಿಷ್ಕರಿಸಿ ಕೊಂಡರು. ನಾವು ಅದನ್ನು ಅವರ ಮೇಲೆ ಕಡ್ಡಾಯಗೊಳಿಸಿರಲಿಲ್ಲ. ಆದರೆ ಅಲ್ಲಾಹನ ಸಂಪ್ರೀತಿಯ ಅಭಿಲಾಷೆಯಿಂದ ಸ್ವತಃ ಅವರೇ ಈ ನವೀನಾಚಾರವನ್ನು ಆರಂಭಿಸಿಕೊಂಡರು. ಆದರೆ ಅವರು ಅದನ್ನು ಪಾಲಿಸಬೇಕಾದ ರೀತಿಯಲ್ಲಿ ಪಾಲಿಸಲಿಲ್ಲ. ಅವರ ಪೈಕಿ ಸತ್ಯವನ್ನು ಸ್ವೀಕರಿಸಿದವರಿಗೆ ನಾವು ಅವರ ಸತ್ಫಲವನ್ನು ದಯಪಾಲಿಸಿದೆವು. ಆದರೆ ಅವರಲ್ಲಿ ಹೆಚ್ಚಿನವರು ಕರ್ಮಭ್ರಷ್ಟರಾಗಿರುತ್ತಾರೆ.

وَرَهْبَانِيَّةً ابْتَدَعُوهَا مَا كَتَبْنَاهَا
عَلَيْهِمْ إِلَّا ابْتِغَاءَ رِضْوَانِ اللَّهِ فَمَا
رَعَوْهَا حَقَّ رِعَايَتِهَا ۖ فَآتَيْنَا الَّذِينَ
آمَنُوا مِنْهُمْ أَجْرَهُمْ ۖ وَكَثِيرٌ
مِنْهُمْ فَاسِقُونَ ٢٧

28. ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಅವನ ಸಂದೇಶವಾಹಕ [ಹ. ಮುಹಮ್ಮದ್(ಸ)]ರ ಮೇಲೆ ವಿಶ್ವಾಸವಿರಿಸಿರಿ. ಅಲ್ಲಾಹನು ನಿಮಗೆ ತನ್ನ ಕೃಪೆಯ ಇಮ್ಮಡಿ ನೀಡುವನು ಮತ್ತು ನಿಮಗೆ ಪ್ರಕಾಶವನ್ನು ಪ್ರದಾನ ಮಾಡುವನು, ನೀವು ಅದರ ಬೆಳಕಲ್ಲಿ ನಡೆಯುವಿರಿ ಮತ್ತು ಅವನು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಅಲ್ಲಾಹನು ಮಹಾಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

يَا أَيُّهَا الَّذِينَ آمَنُوا اتَّقُوا اللَّهَ وَآمِنُوا
بِرَسُولِهِ يُؤْتِكُمْ كِفْلَيْنِ مِنْ رَحْمَتِهِ
وَيَجْعَلْ لَكُمْ نُورًا تَمْشُونَ بِهِ وَيَغْفِرْ
لَكُمْ ۚ وَاللَّهُ غَفُورٌ رَحِيمٌ ٢٨

29. ಅಲ್ಲಾಹನ ಅನುಗ್ರಹದ ಮೇಲೆ ಗ್ರಂಥದವರಿಗೆ ಯಾವ ನಿಯಂತ್ರಣವೂ ಇಲ್ಲವೆಂಬುದು ಮತ್ತು ಅಲ್ಲಾಹನ ಅನುಗ್ರಹವು ಅವನ ಸ್ವಹಸ್ತದಲ್ಲೇ ಇದ್ದು ಅದನ್ನು ಅವನು ತಾನಿಚ್ಛಿಸಿದವರಿಗೆ ನೀಡುತ್ತಾನೆಂಬುದು ಗ್ರಂಥದವರಿಗೆ ತಿಳಿಯುವಂತಾಗಲು (ನೀವು ಈ ಮಾರ್ಗವನ್ನು ಅನುಸರಿಸಬೇಕು) ಅಲ್ಲಾಹನು ಮಹಾ ಅನುಗ್ರಹಶಾಲಿಯಾಗಿದ್ದಾನೆ.

لِئَلَّا يَعْلَمَ أَهْلُ الْكِتَابِ أَلَّا
يَقْدِرُونَ عَلَىٰ شَيْءٍ مِنْ فَضْلِ اللَّهِ
وَأَنَّ الْفَضْلَ بِيَدِ اللَّهِ يُؤْتِيهِ
مَنْ يَشَاءُ ۚ وَاللَّهُ ذُو الْفَضْلِ الْعَظِيمِ ٢٩ ع ٢٠
